

# ಫೀನಿಕ್ಸ್ ಫೆಡರರ್

ಕೋವಿಡ್ ರೋಗಕ್ಕೆ ಟೆನಿಸ್ ಲೋಕವೂ ತಲ್ಲಣಿಸಿದೆ. 2020ರ ವಿಂಬಲ್ಡನ್ ಗ್ರ್ಯಾನ್‌ಪ್ರಿ ಈಗಾಗಲೇ ರದ್ದಾಗಿದೆ. ದಿನಾಂಕದ ಮರುಹೊಂದಾಣಿಕೆ ಮಾಡಿರುವ ಫ್ರೆಂಚ್ ಓಪನ್ ಟೂರ್ನಿ ಕೂಡಾ ಈ ವರ್ಷ ನಡೆಯುವಂತೆ ಕಾಣುತ್ತಿಲ್ಲ. ಆದರೆ ನವೆಂಬರ್‌ನಲ್ಲಿ ಯುಎಸ್ ಓಪನ್ ಟೂರ್ನಿ ನಡೆಯುವ ಸಂಭವವಿದೆ. ಬಹುತೇಕ ಎಂಟು ತಿಂಗಳ ಅಂತರದ ಬಳಿಕ ಈ ಟೂರ್ನಿ ನಡೆದರೆ ಗೆಲ್ಲುವವರಾರು ಎನ್ನುವ ಬಗ್ಗೆ ಟೆನಿಸ್‌ಲೋಕದಲ್ಲಿ ಚರ್ಚೆ ಶುರುವಾಗಿದೆ. ಹಲವರು ರೋಜರ್ ಫೆಡರರ್ ಮತ್ತೆ ಫೀನಿಕ್ಸ್‌ನಂತೆ ಮೇಲೆದ್ದು ಬಂದು ಈ ಪ್ರಶಸ್ತಿ ಗೆಲ್ಲಲಿದ್ದಾನೆ ಎಂದು ಭವಿಷ್ಯ ನುಡಿದಿದ್ದಾರೆ. ಯುಎಸ್ ಓಪನ್‌ನಲ್ಲಿ ಫೈನಲ್‌ವರೆಗೆ ತಲುಪಿದ್ದ ಮಾಜಿ ಆಟಗಾರ ಟಾಡ್ ಮಾರ್ಟಿನ್ ಕೂಡಾ, 'ಫೆಡರರ್ ಮರಳಿ ಗೆಲ್ಲುವುದು ನಿಶ್ಚಿತ' ಎಂದಿದ್ದಾರೆ. ಫೆಡರರ್ ಈ ಸಲ ಯುಎಸ್ ಓಪನ್ ಗೆದ್ದರೆ ದಾಖಲೆಯ 21ನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆದ್ದಂತಾಗುತ್ತದೆ.

ಫೆಡರರ್‌ಗೆ ಈಗ 39 ವರ್ಷ. ಈ ವಯಸ್ಸಿನಲ್ಲಿ ಇನ್ನೂ ವಿಶ್ವದ ಅಗ್ರಮಾನ್ಯ ಟೂರ್ನಿಗಳಲ್ಲಿ ಉಳಿದುಕೊಂಡಿರುವುದೇ ಪವಾಡವೆಂಬಂತೆ ಕಾಣಿಸುತ್ತಿದೆ. ಆದರೆ ಫೆಡರರ್ ತಮ್ಮ ಫಿಟ್‌ನೆಸ್ ಗುಟ್ಟನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಎರಡು ಬಾರಿ ಗಾಯಗೊಂಡು ಕಣದಿಂದ ಹಿಂದೆ ಸರಿದರೂ, ಮತ್ತೆ ಮತ್ತೆ ಪ್ರಶಸ್ತಿ ಗೆಲ್ಲುತ್ತಿರುವುದು ಫೆಡರರ್ ಹೆಗ್ಗಳಿಕೆಯೇ. 22 ವರ್ಷಗಳಷ್ಟು ಸುದೀರ್ಘ ಕಾಲ ಟೆನಿಸ್‌ನ ಶ್ರೇಷ್ಠ ಟೂರ್ನಿಗಳಲ್ಲಿ ಉಳಿದುಕೊಂಡು, ಎದುರಾಳಿಗಳಿಗೆ ಬೆದರಿಕೆಯೊಡ್ಡುವಂತೆ ಆಡುತ್ತಿರುವುದು ನಿಜಕ್ಕೂ ಅದ್ಭುತ ಸಂಗತಿ.

'ಫೆಡರರ್ ತಮ್ಮ ಸಹಜ ಆಟದ ಸಾಮರ್ಥ್ಯದಿಂದಲೇ ಗೆಲ್ಲುವವರು. ನೇರ, ಸಾಂಪ್ರದಾಯಿಕ ಮತ್ತು ಸರಳ ಆಟ ಅವರದ್ದು. ಈ ಸಲ ಯುಎಸ್ ಓಪನ್ ಕಣಕ್ಕಿಳಿದರೆ ಅವರು ಗೆಲ್ಲುವುದು ಖಚಿತ' ಎನ್ನುವುದು ಟಾಡ್ ಮಾರ್ಟಿನ್ ವಿಶ್ವಾಸದ ನುಡಿ.

2020ರ ಟೋಕಿಯೊ ಒಲಿಂಪಿಕ್ಸ್ ಬಳಿಕ ಫೆಡರರ್ ವೃತ್ತಿಪರ ಟೆನಿಸ್‌ನಿಂದ ನಿವೃತ್ತಿ ಆಗಬಹುದು ಎಂದು ಕಳೆದ ವರ್ಷದ ಕೊನೆಯಲ್ಲಿ ಅಂದಾಜು ಮಾಡಲಾಗಿತ್ತು. ಆದರೆ ಈ ವರ್ಷ ಪ್ರಮುಖ ಗ್ರ್ಯಾನ್‌ಪ್ರಿಗಳು ಮತ್ತು ಟೋಕಿಯೊ ಒಲಿಂಪಿಕ್ಸ್ ಕೂಡಾ ಮುಂದಿನ ವರ್ಷಕ್ಕೆ ಮುಂದೂಡಿಕೆ ಆದದ್ದು ಫೆಡರರ್ ನಿವೃತ್ತಿ ದಿನಾಂಕವನ್ನೂ ಮುಂದೂಡಿದಂತಿದೆ. ವೃತ್ತಿಜೀವನದ ಕೊನೆಯಲ್ಲಿ ಮಹತ್ವದ ಪ್ರಶಸ್ತಿಯೊಂದನ್ನು ಗೆದ್ದುಕೊಂಡೇ ನಿವೃತ್ತಿ ಆಗಬೇಕು ಎನ್ನುವ ಇಚ್ಛೆ ಫೆಡರರ್‌ಗೂ ಇದೆ. ಕಳೆದ ವರ್ಷ ಲೇವರ್ ಕಪ್ ಸಂದರ್ಭದಲ್ಲಿ ಫೆಡರರ್ ನಿವೃತ್ತಿ ಆಗುವ ನಿರೀಕ್ಷೆ ಇತ್ತು. ಬಳಿಕ ಟೋಕಿಯೊ ಒಲಿಂಪಿಕ್ಸ್‌ವರೆಗೆ ನಿವೃತ್ತಿಯ ಲೆಕ್ಕಾಚಾರ ಮುಂದುವರಿಯಿತು.

'ಸ್ವಿಸ್ ಮಾಂತ್ರಿಕ'ನೆಂದೇ ಹೆಸರು ಪಡೆದಿರುವ ಫೆಡರರ್, ಟೆನಿಸ್ ಟೂರ್ನಿಗಳು ಇಲ್ಲದಿದ್ದರೂ ಸುದ್ದಿಯಲ್ಲಿರುವುದು ವಿಶೇಷ. ಕೊರೊನಾ ಪೀಡಿತರ ನೆರವಿಗೆ ಅವರ ಒಡೆತನದ 'ರೋಜರ್ ಫೆಡರರ್ ಫೌಂಡೇಷನ್' ಧಾವಿಸಿರುವುದು ಇದಕ್ಕೆ ಕಾರಣ. 'ಆಫ್ರಿಕಾದಲ್ಲಿ ಕೊರೊನಾ ಹಾವಳಿಯಿಂದ ಎಲ್ಲ ಶಾಲೆಗಳೂ ಬಂದಾಗಿದ್ದು ಈ ಶಾಲಾ ಮಕ್ಕಳಿಗೆ ಊಟ ಒದಗಿಸಲು 10 ಲಕ್ಷ ಡಾಲರ್ ಒದಗಿಸಿರುವುದಾಗಿ' ಫೆಡರರ್ ಪ್ರಕಟಿಸಿದ್ದಾರೆ. ನಮೀಬಿಯಾ, ಜಾಂಬಿಯಾ, ಜಿಂಬಾಬ್ವೆ, ಮಲಾವಿ ಮತ್ತು ದಕ್ಷಿಣ ಆಫ್ರಿಕಾದ 64 ಸಾವಿರ ಬಡಮಕ್ಕಳಿಗೆ ಊಟದ ಸೌಲಭ್ಯ ಈ ಹಣದಿಂದ ಆಗುತ್ತಿದೆ. 'ಈ ಶಾಲಾ ಮಕ್ಕಳಿಗೆ ಮನೆಯಲ್ಲಿ ಪೌಷ್ಟಿಕ ಆಹಾರ ಸಿಗುತ್ತಿಲ್ಲ. ಹಿಂದೆ ಶಾಲೆಗಳು ಇದ್ದಾಗ ಅಲ್ಲಿ ಸಿಗುತ್ತಿದ್ದುದಷ್ಟೇ ಪೌಷ್ಟಿಕ ಆಹಾರವಾಗಿತ್ತು. ಈಗ ಶಾಲೆಗಳು ಮುಚ್ಚಿರುವುದರಿಂದ ಹಸಿವೆ ದೊಡ್ಡ ಸಮಸ್ಯೆಯಾಗಿದೆ. ಬಡವರಿಗೆ ಹಸಿವೆಯನ್ನು ಎದುರಿಸಲು ನೆರವಾಗುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ' ಎಂದು ಫೆಡರರ್ ಹೇಳಿಕೆ ಇತರ ಆಟಗಾರರನ್ನೂ ನೆರವಾಗಲು ಪ್ರೇರೇಪಿಸಿರುವುದು ಸುಳ್ಳಲ್ಲ. ಫೆಡರರ್ ಫೌಂಡೇಷನ್ 2003ರಿಂದಲೂ ಆಫ್ರಿಕಾದಲ್ಲಿ ಮಕ್ಕಳಿಗೆ ನೆರವಾಗುವ ಕೆಲಸದಲ್ಲಿ ತೊಡಗಿದೆ.

1998ರಲ್ಲಿ ವೃತ್ತಿಪರ ಟೆನಿಸ್ ರಂಗಕ್ಕೆ ಕಾಲಿಟ್ಟ ಫೆಡರರ್, ಈವರೆಗೆ 12.99 ಕೋಟಿ ಡಾಲರ್ ಹಣವನ್ನು ಟೆನಿಸ್ ಪ್ರಶಸ್ತಿಗಳ ಮೂಲಕ ಗೆದ್ದಿದ್ದಾರೆ. ಈ ತಾರಾವರ್ಚಸ್ಸಿನಿಂದಾಗಿ ಬಹುದೊಡ್ಡ ಜಾಹೀರಾತು ಆದಾಯವೂ ಬರುತ್ತಿದೆ. 2012ರಲ್ಲಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಅವರು, 2004ರಲ್ಲಿ ವಿಶ್ವದ 'ನಂಬರ್ ಒನ್' ಸೀಡ್ ಹೊಂದಿದ್ದರು. ಈಗ ಅವರು ವಿಶ್ವದಲ್ಲಿ 'ನಂಬರ್ 4'ನೇ ರ್‍ಯಾಂಕ್‌ನಲ್ಲಿದ್ದಾರೆ. 2018ರಲ್ಲಿ ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್‌ಪ್ರಿ ಗೆದ್ದದ್ದು ಅವರ ಇತ್ತೀಚಿನ ಅತಿದೊಡ್ಡ ಸಾಧನೆ. ಈಗಾಗಲೆ 8 ಸಲ ವಿಂಬಲ್ಡನ್, ಆರು ಸಲ ಆಸ್ಟ್ರೇಲಿಯನ್ ಗ್ರ್ಯಾನ್‌ಪ್ರಿ, ಐದು ಸಲ ಯುಎಸ್ ಓಪನ್ ಮತ್ತು ಒಮ್ಮೆ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದಿರುವ ಅವರು ವಿಶ್ವ ಟೆನಿಸ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂದೂ ಹೆಸರಿಸಲ್ಪಟ್ಟಿದ್ದಾರೆ. 2008ರ ಬಳಿಕ ಅವರು ಯುಎಸ್ ಓಪನ್ ಗೆದ್ದಿಲ್ಲ. ಹಾಗಾಗಿ ಈ ಸಲ ಗೆದ್ದರೆ ಅದೂ ಒಂದು ದಾಖಲೆಯೇ ಆಗುತ್ತದೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65